Government of Karnataka

Deposition Sheet Form No. R.P. 57

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಲಿಂಗಸಗೂರ

ಸಿ.ಸಿ ನಂಬರ 299/2024

ಸಿ ಡಬ್ಲ್ಯೂ-5
ಪಿ ಡಬ್ಲ್ಯೂ-5

| | | |
|---|---|---|
| ಸಾಕ್ಷಿದಾರರ ಹೆಸರು | ಃ- | ಶಂಕರಗೌಡ |
| ತಂದೆಯ ಹೆಸರು | ಃ- | ಶರಣೆಗೌಡ |
| ವಯಸ್ಸು | ಃ- | 42 ವರ್ಷ |
| ಉದ್ಯೋಗ | ಃ- | ಒಕ್ಕಲುತನ |
| ವಾಸಸ್ಥಳ | ಃ- | ದೇವರಭೂಪೂರ |

**ದಿ.26-03-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.**

***ಮುಖ್ಯ ವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ.***

ಚಾ.ಸಾ-1, 4 ಮತ್ತು 7 ರವರ ಪರಿಚಯ ಇಲ್ಲ. ಚಾ.ಸಾ-6 ನಮ್ಮೂರಿನವರು. ಆರೋಪಿಯನ್ನು ನೋಡಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ನಾನು ಪೋಲಿಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ.

**(ಮಾನ್ಯ ಎಪಿಪಿ ಅವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿ ಸವಾಲಿಗೆ ಅನುಮತಿ ಕೇಳಿರುತ್ತಾರೆ. ಅನುಮತಿ ನೀಡಲಾಯಿತು.)**

**ಪಾಟೀ ಸವಾಲು: ಎಪಿಪಿ ಅವರಿಂದ:-**

ದಿನಾಂಕ 09-03-2023 ರಂದು ಸಂಜೆ 4-00 ಗಂಟೆಗೆ ನಾನು ಅಮರಶ್ವರ ಜಾತ್ರೆಯಿಂದ ಕೆ.ಎಸ್.ಆರ್.ಟಿ.,ಸಿ ನಂ.ಕೆಎ-28, ಎಫ್-1781 ರಲ್ಲಿ ಬರುವಾಗ ನಮ್ಮೂರಿನ ಅಮರೇಶ ತಳವಾರ ಇವರ ಮನೆಯ ಮುಂದಿನ ರಸ್ತೆಯಲ್ಲಿ ಆರೋಪಿತನು ಒಮ್ಮಿಂದೊಮ್ಮೆಲೆ ಬಸ್ಸಿಗೆ ಅಡ್ಡ ಹೋಗಿ ಬಸ್ಸನ್ನು ತಡೆದು ನಿಲ್ಲಿಸಿ ಚಾ.ಸಾ-1 ರವರಿಗೆ ಲೇ ಸೂಳೆ ಮಗನೆ ಎಂದು ಅವಾಚ್ಯವಾಗಿ ಬೈದು ನಮ್ಮ ಮ್ಯಾಜಿಕ್ ಗಾಡಿಯಿಂದ ಕೆಳಗಡೆ ಇಳಿಸಿ ನಿನ್ನ ಬಸ್ಸಿನಲ್ಲಿ ಹತ್ತಿಸಿಕೊಂಡು ಹೋಗುತ್ತೀಯಾ ನಿಮ್ಮದು ಹೆಚ್ಚಾಗಿದೆ ಎಂದು ಚಾ.ಸಾ-1 ರವರ ಸರ್ಕಾರಿ ಕರ್ತವ್ಯಕ್ಕೆ ಅಡ್ಡಿಪಡಿಸಿರುತ್ತಾನೆ ಎಂದರೆ ಸರಿಯಲ್ಲ. ಚಾ.ಸಾ-1 ರವರಿಗೆ ತನ್ನ ಕೈಗಳಿಂದ ಮುಖ

ಮತ್ತು ಬೆನ್ನಿಗೆ ಹೊಡೆದಿರುತ್ತಾನೆ ಎಂದರೆ ಸರಿಯಲ್ಲ. ಆಗ ನಾನು, ಚಾ.ಸಾ-4, 6 ಮತ್ತು 7 ರವರು ಜಗಳ ಬಿಡಿಸಿರುತ್ತೇವೆ ಎಂದರೆ ಸರಿಯಲ್ಲ. ನಂತರ ಚಾ.ಸಾ-1 ರವರಿಗೆ ಆರೋಪಿತನು ಈ ರೂಟಿಗೆ ನಿನ್ನ ಬಸ್ಸನ್ನು ತೆಗೆದುಕೊಂಡು ಬಂದರೆ ನಿನ್ನ ಜೀವ ತೆಗೆಯುತ್ತೇನೆ ಎಂದು ಜೀವ ಬೆದರಿಕೆ ಹಾಕಿರುತ್ತಾನೆ ಎಂದರೆ ಸರಿಯಲ್ಲ. ನಂತರ ನಾನು, ಚಾ.ಸಾ-1 ಮತ್ತು 4 ರವರ ಹೆಸರು ತಿಳಿದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಇದೇ ರೀತಿ ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ನಿರಾಕರಿಸಿದ ಹೇಳಿಕೆಯನ್ನು ನಿ.ಪಿ-5 ಎಂದು ಗುರುತಿಸಲಾಯಿತು. ನಿ.ಪಿ-5 ರಲ್ಲಿರುವ ವಿಷಯ ಗೊತ್ತಿದ್ದರೂ ಸಹ ಆರೋಪಿಗೆ ಶಿಕ್ಷೆಯಿಂದ ತಪ್ಪಿಸಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಶ್ರೀ ಎಸ್.ಹೆಚ್.ಜಿ ವಕೀಲರಿಂದ : -**

ಏನೂ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಲಿಂಗಸಗೂರು.